ಶ್ರೀ ಗಂಗಾಧರಗೌಡ.—೨೯ ವರ್ಷ, ೩೦ ವರ್ಷ, ೩೫ ವರ್ಷಗಳು ಆದ ಅಭ್ಯರ್ಥಿಗಳಿಗೆ ಅರ್ಹತೆಯನ್ನು ಕೊಡಬೇಕೆನ್ನುವ ಉದ್ದೇಶದಿಂದ ಹಾಗೂ ಮಾನವೀಯ ದೃಷ್ಟಿಯಿಂದ ಇದು ಒಳ್ಳೆಯ ನಿಯಮ ವೆಂದು ಸರ್ಕಾರದ ಭಾವನೆ. ಇನ್ನೂ ೨೫.೨೬.೨೮ ವರ್ಷ ವಯಸ್ಸಾದಂತಹವರಿಗೆ ಕ್ರಮೇಣ ಕೆಲಸ ಸಿಗುತ್ತದೆ.

ಶ್ರೀ ಅಣ್ಣಾರಾವ್ ಪಾಟೀಲ್.—ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಎಷ್ಟು ಹುದ್ದೆಗಳಿಗೆ ನೇಮಿಸಿ ಕೊಂಡಿದ್ದೀರಿ.

ಶ್ರೀ ಗಂಗಾಧರಗೌಡ.—ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಒದಗಿಸಿಕೊಡುತ್ತೇವೆ.

ಶ್ರೀ ಜಿ. ಗಂಗಣ್ಣ.—ಸ್ಪೆಷಲ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿದ್ದೀರಿ. ಇದರಲ್ಲಿ ಮಿನಿಮಮ್ ವಯಸ್ಸನ್ನು ೩೯ ವರ್ಷಗಳಿಂದ ೪೫ ವರ್ಷಗಳೆಂದು ಮಾಡಿದ್ದೀರಿ. ಎಸ್.ಸಿ ಮತ್ತು ಎಸ್.ಟಿ.ಗೆ ೪೫ ರಿಂದ ೪೫ ವರ್ಷಗಳು ಎಂದು ಮಾಡಿದ್ದೀರಿ. ಈ ರೀತಿ ಇರುವಾಗ ೨೯ ವರ್ಷಗಳಿಗೆ ನೇಮಕ ಮಾಡುವ ಅವಶ್ಯಕತೆ ಎಲ್ಲಿ ಬರುತ್ತದೆ ?

ಶ್ರೀ ಗಂಗಾಧರಗೌಡ.—ವಯಸ್ಸಾದಂತಹವರಿಗೆ ಉದ್ಯೋಗವನ್ನು ಒದಗಿಸಿ ಕೊಡುವ ಉದ್ದೇಶ ದಿಂದ ಸರ್ಕಾರ ಈ ರೀತಿ ಮಾಡಿದ್ದಾರೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

REPRESENTATIONS

ಶ್ರೀ ಕಳ್ಳಿಗುದ್ದ.—ಮಾನ್ಯ ಅಧ್ಯಕ್ಷರೇ ಬಾಗಲಕೋಟೆಯಲ್ಲಿ ಗಲಾಟೆಯಾಗಿದೆ. ಅದು ಏನಾ ಯಿತು ಎಂದು ನನಗೆ ಬಹಳ ಕಳಕಳಿಯಾಗಿದೆ.

ಅಧ್ಯಕ್ಷರು.—ಆ ವಿಷಯದ ಬಗ್ಗೆ ಒಂದು ನೋಟೀಸನ್ನು ಬರೆದು ಕೊಡಿ.

ಶ್ರೀ ಕಳ್ಳಿಗುದ್ದ.—ನಾನು ಈಗಾಗಲೇ ನೋಟೀಸನ್ನು ಕೊಟ್ಟಿದ್ದೇನೆ.

ಶ್ರೀ ಐ.ವಿ.ಡಿ. ಸಾಲಪ್ಪ.—ಮಾನ್ಯ ಅಧ್ಯಕ್ಷರೇ ನಾವು ಕಳುಹಿಸಿಕೊಟ್ಟಿರುವಂತಹ ಪ್ರಶ್ನೆಗಳಿಗೆ ಜವಾಬು ಬರುತ್ತಿಲ್ಲ. ಆದ್ದರಿಂದ ತಾವು ನಮಗೆ ನ್ಯಾಯ ದೊರಕಿಸಿ ಕೊಡಬೇಕು.

ಅಧ್ಯಕ್ಷರು.—ವಿಧಾನ ಸಭೆ ಸೇರುವುದಕ್ಕಿಂತ ಮುಂಚಿತವಾಗಿ ನಾವು ನೋಟೀಸು ಕೊಡ ಬೇಕು ಎಂದು ತಿಳಿಸಿದ ಎಷ್ಟೋ ದಿವಸಗಳಿಗೆ ನೋಟೀಸುಗಳು ಬರುತ್ತದೆ. ವಿಧಾನಸಭೆ ಸೇರಿ ಎರಡು ಮೂರು ದಿವಸಗಳಾದ ಮೇಲೆ ಜಾಸ್ತಿ ನೋಟೀಸುಗಳು ಬರುತ್ತವೆ. ಇದರಿಂದ ಏನಾಗುತ್ತದೆ ಎಂದರೆ ಮೊದಲು ಯಾರು ನೋಟೀಸು ಕೊಟ್ಟಿರುತ್ತಾರೋ ಅಂತಹ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬೇಗ ಬರುತ್ತದೆ. ತಡವಾಗಿ ಕೊಟ್ಟ ಪ್ರಶ್ನೆಗಳಿಗೆ ಸರ್ಕಾರದಿಂದ ತಡವಾಗಿ ಉತ್ತರ ಬರುತ್ತದೆ.

ಶ್ರೀ ಐ.ವಿ.ಡಿ. ಸಾಲಪ್ಪ.—ನಾನು ಪ್ರಶ್ನೆಯನ್ನು ಕಳುಹಿಸಿಕೊಟ್ಟು ಒಂದು ವರ್ಷವಾಗಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ನನ್ನ ಛೇಂಬರ್‌ಗೆ ಬಂದು ಮಾತನಾಡಬಹುದು.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಅಧ್ಯಕ್ಷರೇ ನೆನ್ನೆ ೩೧ರ ಕೆಳಗೆ ಗೋಖಲೆ ಸಮಿತಿಯ ವರದಿಯ ಬಗ್ಗೆ ಚರ್ಚೆ ಮಾಡಲು ಬಂದಾಗ ಕನ್ನಡದಲ್ಲಿ ವರದಿ ಬಂದಿದೆ ಇಂಗ್ಲೀಷ್‌ನಲ್ಲಿಯೂ ಒಂದು ವರದಿ ಬರಲಿ ಆ ನಂತರ ಬೇಕಾದರೆ ಚರ್ಚೆಗೆ ತೆಗೆದುಕೊಳ್ಳುತ್ತೇವೆ ಎಂದು ತಾವು ಹೇಳಿದ್ದೀರಿ. ಈಗ ಧಾರವಾಡದಿಂದ ನನಗೆ ಫೋನ್ ಬಂದಿದೆ. ಭಿನ್ನವಾಭಿಪ್ರಾಯದಿಂದ ಗಲಭೆ ನಡೆಯುತ್ತಿದೆ ಎಂದು. ಯಾವುದೋ ಒಂದು ದುಷ್ಟ ಶಕ್ತಿಗಳು ಈ ಗಲಭೆಯನ್ನು ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ನಾವು ಈ ವಿಷಯದ ಬಗ್ಗೆ ಒಂದು ಸೂಚನೆಯನ್ನು ಕೊಟ್ಟಿದ್ದೇವೆ. ನಾವು ಕನ್ನಡದ ವಿರೋಧಿಗಳು ಎಂದು ಜನ ತಿಳಿದುಕೊಂಡಿದ್ದಾರೆ. ಆದ ರಿಂದ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ವನ್ನು ಮಾಡಿಕೊಟ್ಟರೆ ನಮ್ಮ ಮನಸ್ಸಿನಲ್ಲಿ ಏನಿದೆ ಎಂಬುದು ಜನರಿಗೆ ಅರ್ಥ ಸಂಪೂರ್ಣವಾಗಿ ತಿಳಿಯುತ್ತದೆ. ಆದ್ದರಿಂದ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟೆತ್ತಿ ಧಾರವಾಡದಲ್ಲಿ ಗಲಭೆಯಾಗುತ್ತಿದೆ.

ನಾಳೆ ಇನ್ನೂ ಶಿವಮೊಗ್ಗ ಮುಂತಾದ ಎರಡು ಮೂರು ಕಡೆಗಳಲ್ಲಿ ಗಲಭೆಯಾಗಬಹುದು. ನಾವೂ ಯಾವತ್ತೂ ಕನ್ನಡದ ವಿರುದ್ಧ ಇಲ್ಲವೇ ಇಲ್ಲ ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ರಾಜ್ಯ ಭಾಷೆ ಕನ್ನಡವಾಗಬೇಕು ಎಂದು ಸರ್ವಸಮ್ಮತವಾಗಿ ಒಪ್ಪಿಕೊಂಡಿದ್ದೇನೆ. ಆದ್ದರಿಂದ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಿನ್ನೆ ನಾನು ಹೇಳಿದ್ದೇನೆ. ಸರ್ಕಾರದ ಪರವಿಯಿಂದ ರಿಪೋರ್ಟ್ ಬರಬೇಕು. ಇನ್ನು ಎರಡು ಮೂರು ದಿವಸಗಳಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೇನೆ.

ಶ್ರೀಮತಿ ಆನುಸೂಯ ಗಜಾನನ ಶರ್ಮ.—ಮಾನ್ಯ ಅಧ್ಯಕ್ಷರೇ ಮಹಿಳಾ ಸಚಿವರು ಮಾತನಾಡುವಾಗ ಒಂದು ವಿಷಯವನ್ನು ಹೇಳಿದರು. ಆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನನಗೆ ಅವಕಾಶವೇ ಸಿಗಲಿಲ್ಲ. ಮಹಿಳಾ ಸಚಿವರು ಮಹಿಳೆಯರನ್ನು ರಕ್ಷಣೆ ಮಾಡತಕ್ಕಂತಹವರು. ಮಹಿಳೆಯರಿಗೆ ೧೦೦-೫೦ ಸ್ಥಾನಗಳು ದೊರಕಿಸಿಕೊಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ? ಎಂದು ಕೇಳಿದ್ದಕ್ಕೆ ಗಂಡಸರು ದೊಡ್ಡ ಮನಸ್ಸು ಮಾಡಿದರೆ ಸಿಗಬಹುದು ಎಂದು ಹೇಳಿದ್ದಾರೆ. ಸರ್ಕಾರದವರೇ ಈ ರೀತಿಯಾಗಿ ಹೇಳಿದರೆ ಇನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ರಕ್ಷಣೆ ಮಾಡುವವರು ಯಾರು.

ಶ್ರೀ ಪಿ. ರಾಮದೇವ್.—ನಾನು ಹರೀಶ್ ಎಂಬ ಆರ್.ಸಿ. ಕಾಲೇಜಿನ ವಿದ್ಯಾರ್ಥಿಯ ಮೇಲೆ ಹಲ್ಲೆಯಾದ ಬಗ್ಗೆ ಒಂದು ನೋಟೀಸು ಕೊಟ್ಟು ಸುಮಾರು ಎರಡು ದಿನಸಗಳಾಯಿತು. ಅಲ್ಲಿ ಅವರವರಲ್ಲೇ ಗಲಾಟೆಯಾಗಿದೆ. ಮಾನ್ಯ ಜಿ.ಬಿ. ಶಂಕರರಾಯರು ಸಪ್ತಾಂಭದಲ್ಲಿ ಅಧ್ಯಕ್ಷತೆ ವಹಿಸಿದ್ದಾರೆ. ವಿದ್ಯಾರ್ಥಿ ಅಧ್ಯಕ್ಷರನ್ನು ಕೊಲೆ ಮಾಡತಕ್ಕ ಪ್ರಯತ್ನ ನಡೆಯಿತು. ಅನೇಕ ಕಾಲೇಜುಗಳಲ್ಲಿ ಮುಷ್ಕರ ಉಂಟಾಗುತ್ತಿದೆ. ದಯವಿಟ್ಟು ಅದನ್ನು ಹಾಕಿ ಕೊಳ್ಳಬೇಕು. ಜಿ.ಬಿ. ಆಂಜನಪ್ಪ ಎಂಬ ವಿದ್ಯಾರ್ಥಿಯನ್ನು ಸ್ಕಿಕ್ಯಾಪಟ್ಟೆ ಹೊಡೆದಿದ್ದಾರೆ, ಆತನನ್ನು ಆಸ್ಪತ್ರೆಗೆ ಸೇರಿಸಿದ್ದರು, ಅದರ ಬಗ್ಗೆ ಗಲಾಟೆಯಾಗಿದೆ.

ಅಧ್ಯಕ್ಷರು.—ಅದನ್ನು ನಾನು ನೋಡಿಸುತ್ತೇನೆ.

ಶ್ರೀ ಪಿ. ರಾಮದೇವ್.—ಪೋಷಕರಿಗೆ ತೊಂದರೆಯಾಗಿದೆ.

ಅಧ್ಯಕ್ಷರು.—ನಿಮ್ಮ ಕಾಲಿಂಗ್ ಅಟೆಷನ್ಸ್ ಬಹಳ ಇರುತ್ತವೆ.

ಶ್ರೀ ಪಿ. ರಾಮದೇವ್.—ಈಗ ಪರೀಕ್ಷಾ ಕಾಲ, ಹುಡುಗರಿಗೆ ತೊಂದರೆಯಾಗಿದೆ.

ಅಧ್ಯಕ್ಷರು.—ನಾನು ತರಿಸಿ ನೋಡುತ್ತೇನೆ.

ಶ್ರೀ ಬಿ.ವಿ. ಕಕ್ಕಿಲಾಯ.—ಇವತ್ತು ನಾನು ಒಂದು ಕಾಲಿಂಗ್ ಅಟೆಷನ್ ಕಳಿಸಿದ್ದೇನೆ. ಅದು ಬಹಳ ಮುಖ್ಯವಾದಂಥ ವಿಚಾರ. ಬಾಗಲಕೋಟೆಯಲ್ಲಿ ಒಂದು ಕೋಆಪರೇಟಿವ್ ನೂಲಿನ ಗಿರಣಿ ಇದೆ. ಅಲ್ಲಿನ ಮ್ಯಾನೇಜ್‌ಮೆಂಟ್‌ನವರು ಪೋಲೀಸರನ್ನು ಕರೆಸಿ ಬಿಟ್ಟು ಕಾರ್ಮಿಕರು ಕೆಲಸಕ್ಕೆ ಒಳಗೆ ಹೋಗದಹಾಗೆ ತಡೆದಿದ್ದಾರೆ. ಪೋಲೀಸರು ಏಕೆ ಹೋಗಬೇಕಾಗಿತ್ತು. ಅಲ್ಲಿ ಸ್ಟ್ರೈಕೂ ಏನೂ ಇಲ್ಲ. ಅಂಥಾದ್ದರಲ್ಲಿ ಮ್ಯಾನೇಜ್‌ಮೆಂಟಿನವರು ಪೋಲೀಸರನ್ನು ಕರೆಸಿ ಫ್ಯಾಕ್ಟರಿಯ ಬಾಗಿಲಲ್ಲಿ ನಿಲ್ಲಿಸಿ ಕಾರ್ಮಿಕರನ್ನು ಒಳಗೆ ಹೋಗದಹಾಗೆ ತಡೆಯತಕ್ಕಂಥ ಪರಿಸ್ಥಿತಿಯನ್ನು ಏಕೆ ನಿರ್ಮಾಣ ಮಾಡುತ್ತಿದ್ದಾರೋ ಆರ್ಥವಾಗುತ್ತಿಲ್ಲ. ಅದರ ಬಗ್ಗೆ ನಾನು ಕಾಲಿಂಗ್ ಅಟೆನ್‌ಷನ್ ಕಳಿಸಿದ್ದೇನೆ. ನಾಳೆ ಇದರ ಬಗ್ಗೆ ಅವಕಾಶ ಮಾಡಿಕೊಡಬೇಕು. ಇದರ ಬಗ್ಗೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕಾರ್ಮಿಕರಿಗೆ ಆ ರೀತಿ ಮಾಡದಹಾಗೆ ಪೋಲೀಸರಿಗೆ ತಿಳಿಸಿ. ಪೋಲೀಸರು ಏಕೆ ಮಧ್ಯೆ ಪ್ರವೇಶ ಮಾಡುತ್ತಾರೆ ಪೋಲೀಸರಿಗೆ ಏನು ಕೆಲಸ.

ಶ್ರೀ ಪಂಪಾಪತಿ.—ಕಾರ್ಮಿಕರ ಮಧ್ಯೆ ವಿವಾದ ಇದ್ದರೆ ಕಾರ್ಮಿಕ ಇಲಾಖೆ ಮಧ್ಯೆ ಪ್ರವೇಶ ಮಾಡಿ ಪರಿಹಾರ ಮಾಡಬೇಕು. ಪೋಲೀಸರು ಹೋಗಿ ಕಾರ್ಮಿಕರಿಗೆ ತಡೆ ಹಾಕಿ ಅವರಿಗೆ ತೊಂದರೆ ಕೊಡುತ್ತಿದ್ದಾರೆ, ಬಹಳ ಘರ್ಷಣೆ ಆಗುತ್ತಾ ಇದೆ. ಗಡಿಬಿಡಿಯಾಗಿದೆ. ಕಾರ್ಮಿಕರಿಗೆ ತುಂಬ ತೊಂದರೆಯಾಗಿದೆ ತಕ್ಷಣ ಅವರಿಗೆ ರಕ್ಷಣೆ ಕೊಡಿ. ಆದುದರಿಂದ ತಕ್ಷಣ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಕಕ್ಕಿಲಾಯ ಅವರು ಈ ದಿವಸ ಏನು ಕೊಟ್ಟಿದ್ದಾರೆ ಅದನ್ನು ತರಿಸಿ ನೋಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೆ. ಪ್ರಶ್ನೆಗಳನ್ನು ತಡವಾಗಿ ಕಳಿಸಿದರೆ ಉತ್ತರ ಗಳು ಬರುವುದಿಲ್ಲ. ಕಷ್ಟವಾಗುತ್ತದೆ ಎಂದು ತಾವು ಹೇಳಿದಿರಿ. ನಾನು ಅದನ್ನು ಒಪ್ಪುತ್ತೇನೆ. ನಾನು ಹೋದ ಸಲಕ್ಕಿಂತ ಮೊದಲು ಕಳಿಸಿದ ಪ್ರಶ್ನೆಗಳಿವೆ, ಪುನಃ ಅದನ್ನು ಬರೆದು ಕೊಟ್ಟಿದ್ದೇನೆ. ಇತ್ತೀಚೆಗೆ ಒಂದು ತಿಂಗಳ ಮೊದಲೇ ಪ್ರಶ್ನೆಗಳನ್ನು ಕಳಿಸಿದ್ದೇನೆ. ಅವು ಹೆಚ್ಚಾಗಿ ರಾಜ್ಯದ ಬೆಳವಣಿಗೆ ಮತ್ತು ಅಭಿ ವೃದ್ಧಿಗೆ ಸಂಬಂಧಪಟ್ಟಂಥ ಪ್ರಶ್ನೆಗಳು ಮತ್ತು ಹಣಕಾಸಿನ ವಿಚಾರವೂ ಇದೆ. ಪರ್ಟಿಕ್ಯುಲರಾಗಿ ಎಲೆಕ್ಟ್ರಿಸಿಟಿ ಬಗ್ಗೆ ಕೇಳಿದ್ದೇನೆ, ಮೇಜರ್ ಇರಿಗೇಷನ್ ಬಗ್ಗೆ ಕೇಳಿದ್ದೇನೆ. ಸಿಮೆಂಟ್ ಡಿಸ್ಟ್ರಿಬ್ಯೂಷನ್ ಬಗ್ಗೆ ಕೇಳಿದ್ದೇನೆ ಫುಡ್ ಡಿಸ್ಟ್ರಿಬ್ಯೂಷನ್ ಬಗ್ಗೆ ಕೇಳಿದ್ದೇನೆ. ಅನೇಕ ಮಹತ್ವದ ಜನರ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದೇನೆ. ನನ್ನ ಕಡೆ ಫೈಲ್ ಇದೆ. ಈ ಪ್ರಶ್ನೆಗಳನ್ನು ಕಳಿಸಿ ಒಂದು ತಿಂಗಳ ಮೇಲೆ ಆಗಿದೆ. ಇಂತಹ ಮಹತ್ವದ ಪ್ರಶ್ನೆಗಳಿಗೆ ಉತ್ತರಗಳಿಲ್ಲ. ಲೆಜಿಸ್ಲೇಚರ್ ಸೆಕ್ರೆಟರಿಯಿಂದ ರಿಮೈಂಡರ್ಸ್ ಹೋಗುತ್ತಾ ಇದೆ. ಹೋದ ಸಲ ಕೇಳಿದ ಪ್ರಶ್ನೆಗಳಿಗೆ ಇದುವರೆಗೆ ಉತ್ತರ ಬಂದಿಲ್ಲ. ಎಲೆಕ್ಟ್ರಿಸಿಟಿ ಪವರ್ ಕಟ್ ಬಗ್ಗೆ ಕೇಳಿದ್ದೇನೆ.

ಅಧ್ಯಕ್ಷರು.— ನಾನೂ ಕೂಡ ಎಲ್ಲರಿಗೂ ಪತ್ರ ಬರೆದಿದ್ದೇನೆ. ಚೀಫ್ ಸೆಕ್ರೆಟರಿಯವರಿಗೂ ಹೇಳಿ ದ್ದೇನೆ, ಸರ್ಕಾರದಿಂದ ಉತ್ತರ ಬರತಕ್ಕಂಥಾದ್ದು ಬಹಳ ತಡವಾಗಿದೆ, ಇದು ವಿಷಾದಕರವೇಸರಿ. I have written to the Chief Secretary also. It is a very sorry state of affairs. Hon. Ministers have to lend their ears, otherwise, it is very difficult to act here. ಮಾನ್ಯ ಮಂತ್ರಿಗಳು ದಯಮಾಡಿ ಗಮನಿಸಬೇಕು. ಸರ್ಕಾರ ದಿಂದ ಉತ್ತರ ಬರತಕ್ಕಂಥಾದ್ದು ತುಂಬಾ ತಡವಾಗುತ್ತಾ ಇದೆ. ನನ್ನ ಹತ್ತಿರ ಲಿಸ್ಟ್ ಇದೆ. ನಮ್ಮ ಕಾನೂನಿನಲ್ಲಿ ಪ್ರಶ್ನೆ ಹೋದ ೧೫ ದಿವಸಗಳೊಳಗೆ ಉತ್ತರ ಕಳಿಸಬೇಕು, ತಡವಾದರೆ ಅದಕ್ಕೆ ಏನು ಕಾರಣ ಎನ್ನುವುದನ್ನು ತಿಳಿಸಬೇಕು ಎಂದು ಇದೆ. ನನ್ನಿಂದ ಪ್ರಯತ್ನ ಮಾಡಿ ಆಗಿದೆ. ಆದರೆ ಉತ್ತರ ಬರುತ್ತಾ ಇಲ್ಲ. ಸಂಬಂಧಪಟ್ಟ ಮಂತ್ರಿಗಳಿಗೆ ನಾವು ಹಿಂದೆ ಪತ್ರ ಬರೆದಿದ್ದೇವೆ, ಆದರೂ ಉತ್ತರ ಬರುತ್ತಾ ಇಲ್ಲ. ಉತ್ತರಗಳು ಬರದೇ ಇರುವುದರಿಂದ ಮಾನ್ಯ ಸದಸ್ಯರು ಹೀಗೆ ಪ್ರಶ್ನೆಯನ್ನು ಮತ್ತೆ ಮತ್ತೆ ಸದನದಲ್ಲಿ ಎತ್ತತಕ್ಕ ಪರಿಸ್ಥಿತಿಗೆ ಬಂದು ನಿಂತಿದ್ದೇವೆ. ಇದು ಸರಿಯಾದುದಲ್ಲ. ಕೆಲವು ಸದಸ್ಯರು ಪ್ರಶ್ನೆ ಗಳನ್ನು ಎರಡು ಮೂರು ಸಾರಿ ರಿನ್ಯೂ ಮಾಡಿದರೂ ಉತ್ತರ ಬರಲಿಲ್ಲ. ಕೊಶ್ಚನ್ಸ್ ಲ್ಯಾಪ್ಸ್ ಆಗ ಬಹುದು, ಉತ್ತರ ಸರ್ಕಾರದ ಮಟ್ಟದಲ್ಲೇ ಇರುತ್ತದೆ. ರಿನ್ಯೂ ಮಾಡಿದರೂ ಉತ್ತರ ಬರಲಿಕ್ಕೆ ಸಾಧ್ಯವಾಗದೇ ಇರತಕ್ಕಂಥಾದ್ದು ವಿಷಾದಕರವಾದ ವಿಚಾರ. ಮಾನ್ಯ ಕಾನೂನು ಮಂತ್ರಿಗಳು ಇದರ ಬಗ್ಗೆ ಗಮನಹರಿಸಬೇಕಾಗುತ್ತದೆ. ಸಂಬಂಧಪಟ್ಟ ಕಾರ್ಯದರ್ಶಿಗಳಿಗೆ ತಿಳಿಸಿ, ಜಾಗ್ರತೆ ಉತ್ತರಗಳನ್ನು ತರಿಸಿ ಸದನಕ್ಕೆ ಒದಗಿಸುವುದಕ್ಕೆ ಸಹಾಯ ಮಾಡಬೇಕಾಗುತ್ತದೆ, ಇಲ್ಲದೇ ಹೋದರೆ ಕಷ್ಟವಾಗುತ್ತದೆ. ಕೆಲವು ದಿವಸಗಳಿಂದ ದಿವಸಕ್ಕೆ ೮ ಪ್ರಶ್ನೆಗಳನ್ನು ಹಾಕುವಂತೆ ಮಾಡಿದ್ದೇವೆ, ಇವತ್ತು ಮಾತ್ರ ೧೧ ಪ್ರಶ್ನೆ ಗಳನ್ನು ಹಾಕಿದ್ದೇವೆ. ಇಲ್ಲದೇ ಹೋದರೆ ಒಂದು ದಿವಸಕ್ಕೆ ೧೫ ಪ್ರಶ್ನೆಗಳನ್ನು ಹಾಕಬೇಕಾಗುತ್ತಿತ್ತು. ತಮಗೆ ಗೊತ್ತಿದೆ, ಲೋಕಸಭೆಯಲ್ಲಿ ಪ್ರಶ್ನೆ ಬಂದ ತಕ್ಷಣ ಟೆಲಿಗ್ರಾಂ ಮೂಲಕ ಕಾಂಟ್ಯಾಕ್ಟ್ ಮಾಡಿ ಕನ್‌ಫರ್ಮೇಷನ್ ಮಾಡಿಕೊಂಡು ತೆಗೆದುಕೊಳ್ಳತಕ್ಕಂಥಾದ್ದಿದೆ. ಹಾಗಿರುವಾಗ ಇಲ್ಲಿ ಉತ್ತರಗಳನ್ನು ತರಿಸುವುದಕ್ಕೆ ಆಗುವುದಿಲ್ಲ ಅಂದರೆ ಒಪ್ಪುವುದಕ್ಕೆ ಆಗುವುದಿಲ್ಲ. ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳು ತಮ್ಮ ಕೊಲೀಗ್ಸ್‌ಗೆ ರಿಕ್ವೆಸ್ಟ್ ಮಾಡಿಕೊಂಡು ಉತ್ತರಗಳನ್ನು ಜಾಗ್ರತೆ ತರಿಸಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಪರ್ಟಿಕ್ಯುಲರಾಗಿ ನಾನು ಪವರ್ ಕಟ್ ಬಗ್ಗೆ ಪ್ರಶ್ನೆ ಕೇಳಿ ದ್ದೇನೆ, ಅದು ಬಹಳ ಮುಖ್ಯವಾದ ಪ್ರಶ್ನೆ. ಇನ್ನು ಸದನ 4 ದಿವಸ ಮಾತ್ರ ಕೂಡುತ್ತದೆ.

MR. SPEAKER.— All questions are important from the point of view of members. ಕೆಲವು ಮುಖ್ಯ ಕೆಲವು ಮುಖ್ಯವಲ್ಲ ಎಂದಲ್ಲ, ಸದಸ್ಯರ ದೃಷ್ಟಿಯಿಂದ ಅವರು ಕಳಿಸಿರತಕ್ಕ ಪ್ರಶ್ನೆಗಳು ಮುಖ್ಯವಾಗಿರುತ್ತವೆ.

SRI S. R. BOMMAI.— I am speaking from the point of view of the entire State. We will have to raise it in one form or the other.